ಮಾಡಿಕೊಡುವುದರಿಂದ ಆಗುತ್ತದೆ. ನಾವೇನು ಹೇಳುತ್ತಿದ್ದೇವೆ. ಸುತ್ತೋಲೆಗಳ ಮೂಲಕವಾಗಿ ರೂ.193ರ ಸ್ಪಿರಿಟ್ ಏನಿದೆ, ಅದು ಡೈಲ್ಯೂಟ್ ಆಗಿದೆ ಎಂದು ಹೇಳತಕ್ಕಂಥಾದ್ದು. ತಾವೇನು ಮೂರು ತಿಂಗಳಿಗೊಂದು ಸಾರಿ ಸಭೆ ಕರೆಯುತ್ತೇವೆಂದು ಹೇಳಿದ್ದೀರಿ, ಅದರ ಜೊತೆಗೆ ಗುಣಮಟ್ಟವನ್ನು ಹೆಚ್ಚು ಮಾಡುವ ದೃಷ್ಟಿಯಿಂದಾಗಿ, actually there is lot of confusion and chaos in that level, ಅದನ್ನು ಸರಿ ಮಾಡಿಸಬೇಕು. ಇದನ್ನು ಮಂತ್ರಿಗಳಾಗಿ ತಾವೊಬ್ಬರೇ ಮಾಡುವುದಕ್ಕಾಗುವುದಿಲ್ಲ. ಶಾಸಕರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳು, ಚುನಾಯಿತ ಪ್ರತಿನಿಧಿಗಳು ಎಲ್ಲರೂ ಸಹಕಾರ ಕೊಡಬೇಕಾಗುತ್ತದೆ. ಅದರಿಂದಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಸುತ್ತೋಲೆಗಳನ್ನು ಕಳುಹಿಸಿ ಆ ಸ್ಪಿರಿಟನ್ನು ಡೈಲ್ಯೂಟ್ ಮಾಡಿದೆ. ಇದು ತೊಂದರೆ ಬಂದಿರತಕ್ಕಂಥಾದ್ದು.

ಶ್ರೀ ಎಂ.ವೈ. ಘೋರ್ಪಡೆ :— ಆ ಸ್ಪಿರಿಟ್‌ನ್ನು ಡೈಲ್ಯೂಟ್ ಮಾಡುವ ಉದ್ದೇಶ ಇಲ್ಲ. ಆ ಸ್ಪಿರಿಟನ್ನು ಲೆಟರ್-ಹ್ಯಾಂಡ್ ಸ್ಪಿರಿಟ್ ಆಗಿ ನಾವು ಕಾಪಾಡಿಕೊಂಡು ಹೋಗುತ್ತೇವೆ. ಹೊಸದಾಗಿ ಆರಿಸಿ ಬಂದಿರತಕ್ಕ ಜನ ಒಂದೊಂದು ಸಲ ಅವರಿಗೆ ಸಾಕಷ್ಟು ಅನುಭವ ಇರುವುದಿಲ್ಲ. ಅದಕ್ಕೋಸ್ಕರ ನಾವು ತರಬೇತಿಗಾಗಿ ಬಹಳ ಮಹತ್ವ ಕೊಡುತ್ತಾ ಇದ್ದೇವೆ. ಕಂಟಿನ್ಯೂಯಸ್ ಟ್ರೈನಿಂಗ್ ಪ್ರೋಗ್ರಾಂ ಮಾಡುತ್ತಾ ಇದ್ದೇವೆ. ಇದರಿಂದ ಈ ವಿಷಯಗಳನ್ನು ನನ್ನ ಜೊತೆಗೆ, ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಸರಿಪಡಿಸಲಿಕ್ಕೆ ಅವರಿಗೆ ಅವಕಾಶವಾಗುತ್ತದೆ.

ಶ್ರೀ ಸಿ. ಬೈರೇಗೌಡ :— ಕುದುರೆ ಲಗಾಮು ಸವಾರನ ಕೈಯಲ್ಲಿ ಇರಬೇಕು. ಕುದುರೆ ಕೈಲಿ ಲಗಾಮು ಇರಬಾರದು. ಇಷ್ಟೇ ನಮ್ಮ ಉದ್ದೇಶ ಇರತಕ್ಕಂಥಾದ್ದು. ಆ ಕೆಲಸವನ್ನು ತಾವು ದಯವಿಟ್ಟು ಮಾಡಿ.

(ಈ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಮರಣ ಹೊಂದಿದವರಿಗೆ ಪರಿಹಾರ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ಅಧ್ಯಕ್ಷರೇ, ಮೊನ್ನೆ ಆದಂಥ ಅತಿವೃಷ್ಟಿಯಲ್ಲಿ ನನ್ನ ತಾಲ್ಲೂಕಿನಲ್ಲಿ ಜೀಪೊಂದು ಕೊಚ್ಚಿ ಹೋಗಿ, ಅದರಲ್ಲಿದ್ದ ಮೂರು ಜನ ಮರಣ ಹೊಂದಿದರು ಎಂಬ ಮಾತನ್ನು ನಾನು ಸರ್ಕಾರದ ಗಮನಕ್ಕೆ ತೆಗೆದುಕೊಂಡುಬಂದೆ. ಅದರಲ್ಲಿ ರಸ್ತೆ ಸಂಪರ್ಕ ಕೂಡ ಕಡಿದು ಹೋಗಿದೆ ಎಂಬುದನ್ನೂ ಹೇಳಿದ್ದೇನೆ. ಇದುವರೆಗೂ ಆ ರಸ್ತೆ ಯಾವುದೇ ಕಾರಣಕ್ಕೂ ರಿಪೇರಿಯಾಗಿಲ್ಲ. ಅವರಿಗೆ ಸಂಬಂಧಪಟ್ಟಂತೆ ಪರಿಹಾರ ಕೂಡ ಸರಿಯಾಗಿ ಆಗಿಲ್ಲ. ಮೂರು ಜನಕ್ಕೆ ಒಂದೊಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಇವತ್ತು ಆ ಸಂಬಂಧಪಟ್ಟ ವ್ಯಕ್ತಿ ಒಂದು ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿ, ಸುಮಾರು ನೂರಾರು

ಮಕ್ಕಳಿಗೆ ಅನುಕೂಲವಾಗತಕ್ಕ ವ್ಯಕ್ತಿಯಾಗಿದ್ದರು. ಆತನಿಗೆ ಕೊಟ್ಟಿರತಕ್ಕ ಪರಿಹಾರ ಇನ್ನೂ ಸಾಲದು, ಆತನಿಗೆ ಸರ್ಕಾರ ಹೆಚ್ಚಿನ ಪರಿಹಾರ ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಕಾಮಗಾರಿಗಾಗಿ ಪರಿಹಾರದ ಹಣವನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಹೇಳಿದ್ದರೂ ಕೂಡ ಇನ್ನೂ ಕೂಡ ಒಂದು ರೂಪಾಯಿ ಹಣವನ್ನೂ ಪರಿಹಾರ ಕೊಟ್ಟಿಲ್ಲ. ಆ ಸೇತುವೆ ಕಟ್ಟಿಲಕ್ಕೆ ಸುಮಾರು 10-15 ಲಕ್ಷ ರೂಪಾಯಿಗಳ ದುಡ್ಡು ಬೇಕಾಗುತ್ತಿದೆ. ಆದರೆ, ಇವತ್ತು ಒಂದು ರೂಪಾಯಿ ಕೂಡ ಅತಿವೃಷ್ಟಿ ಕಾಮಗಾರಿಗೋಸ್ಕರ ಪರಿಹಾರ ಕೊಟ್ಟಿಲ್ಲ. ಆದ್ದರಿಂದ, ಈ ಬಗ್ಗೆ ನಾನು ತೀವ್ರವಾಗಿ ಸರ್ಕಾರಕ್ಕೆ ಒತ್ತಾಯ ಮಾಡಿ, ಆ ಹಣವನ್ನು ಪರಿಹಾರದ ಮೂಲಕ ಆದಷ್ಟು ಜಾಗ್ರತೆ ಬಿಡುಗಡೆ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ದಿನಾಂಕ : 22-10-2000 ರಂದು ಮಧ್ಯರಾತ್ರಿಯಲ್ಲಿ ಬಿದ್ದ ಭಾರಿ ಮಳೆಯಿಂದ ಅಂದರೆ, 123 ಮಿಲಿಮೀಟರ್ ಮಳೆಯಿಂದಾಗಿ ತುರುವೇಕೆರೆ ತಾಲ್ಲೂಕು ಕಸಬಾ ಹೋಬಳಿ ಆನೆಮಳೆ, ಪುಟ್ಟಮಾರಿಹಳ್ಳಿ ಮಧ್ಯೆ ಬೋಜಿಹಳ್ಳಿ ತುರುವೇಕೆರೆಗೆ ಹಾದುಹೋಗುವ ರಸ್ತೆ ಸೇತುವೆ ಮೇಲೆ ಟೆಂಪೋ ಟ್ರಾಕ್ಸ್ ನಂ. ಕೆ.ಎ. 06-137ರಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀ ಗೋವಿಂದರಾಜು ಬಿನ್ ಕೆ. ನಿಂಗಪ್ಪ 35 ವರ್ಷ, ಕೊಟ್ಟೂರಿನ ಕೊಟ್ಟಿಗೆ; ಶ್ರೀ ಭಾಸ್ಕರ ಬಿನ್ ವೆಂಕಟರಾಮಯ್ಯ, 30 ವರ್ಷ, ತುರುವೇಕೆರೆ ಟೌನ್; ಶ್ರೀ ಜಗದೀಶ ಬಿನ್ ವೀರಭದ್ರಾಚಾರಿ 20 ವರ್ಷ, ಬೋರೇಗೌಡರ ಪಾಳ್ಯ- ಇವರುಗಳು ನೀರಿನ ಒತ್ತಡದಿಂದ ಆಯತಪ್ಪಿ ಸೇತುವೆ ಕೆಳಗಡೆ ಬಿದ್ದು ಮೃತಪಟ್ಟಿರುತ್ತಾರೆ. ಮೇಲ್ಕಂಡ ಮೂರು ಜನರಿಗೂ ಗ್ರಾಮಸ್ಥರು ಭಾರಿ ಮಳೆ ಬರುತ್ತಿರುವುದರಿಂದ, ಹಳ್ಳದಲ್ಲಿ ನೀರು ಹೆಚ್ಚಾಗಿ ಹೋಗುತ್ತಿರುವುದರಿಂದ ಪ್ರಯಾಣ ಮಾಡದಿರಲು ತಿಳಿಸಿದಾಗ್ಯೂ ಸಹ, ಮೇಲ್ಕಂಡ ಮೂವರು ಪ್ರಯಾಣ ಮಾಡಿ, ಸೇತುವೆ ಕೆಳಗಡೆ ಬಿದ್ದು, ನೀರಿನಲ್ಲಿ ಕೊಚ್ಚಿಹೋಗಿ ಮೃತಪಟ್ಟಿರುತ್ತಾರೆ. ಶ್ರೀ ಉಮೇಶ ಬಿನ್ ಬೋರಲಿಂಗಯ್ಯ ಕಸಬಾ ಹೋಬಳಿ, ತಾಳಿಕೆರೆ ಗ್ರಾಮ- ಇವರೂ ಸಹ ದಿನಾಂಕ: 22-10-2000ರಂದು ಬಿದ್ದ ಭಾರಿ ಮಳೆಯಿಂದ ನೀರಿನ ಪ್ರವಾಹ ಹೆಚ್ಚಾಗಿ ಕೆರೆ ದಾಟುವಾಗ ತಾಳಿಕೆರೆಯ ಚಿಕ್ಕಕೆರೆಯಲ್ಲಿ ಮುಳುಗಿ ಮೃತಪಟ್ಟಿರುತ್ತಾರೆ. ಮೇಲ್ಕಂಡ ಎರಡು ಪ್ರಕರಣಗಳನ್ನೂ ಸಹ ಪೂರ್ಣವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲು ಅನುದಾನ ಲಭ್ಯವಿರುತ್ತದೆ.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ಶ್ರೀ ಅಶೋಕ್‌ರವರು ನಿನ್ನೆ ರೈಸ್ ಮಾಡಿದ ವಿಷಯಕ್ಕೆ ಸಂಬಂಧಪಟ್ಟಂತೆ ಈಗ ಮಾನ್ಯ ಹಾಗೋಡು ತಿಮ್ಮಪ್ಪನವರು ಉತ್ತರ ಹೇಳುತ್ತಾರೆ.